**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕಃ 27.03.2025</u>**

**<u>ಪಾಟೀ ಸವಾಲುಃ ಶ್ರೀ. ವೈ ಎ ಎಸ್ ಆರೋಪಿ ಪರ ವಕೀಲರಿಂದಃ</u>**

1. ನಾವು ಒಟ್ಟು 4 ಜನ ಅಣ್ಣ ತಮ್ಮಂದಿರು. ನಾನು ಮತ್ತು ನನ್ನ ಸಹೋದರರು ಸೇರಿಕೊಂಡು ನಮ್ಮ ಚಿಕ್ಕಪ್ಪ ರವರ ವಿರುದ್ದ ಅಸಲು ದಾವಾ ಸಂಖ್ಯೆ.1443/2011 ರಂತೆ ದಾವೆ ಸಲ್ಲಿಸಿರುತ್ತೇವೆ. ಬೆಳ್ಳಳ್ಳಿ ಗ್ರಾಮದ ಸರ್ವೆ ನಂ.53 ರಲ್ಲಿ 4 ಗುಂಟೆ ಆಸ್ತಿಗೆ ಮೇಲ್ಕಂಡ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿ. ಸದರಿ 4 ಗುಂಟೆ ಜಮೀನನ್ನು ನಮ್ಮ ಕುಟುಂಬದವರು ಸೈಯದ್ ಮೆಹಬೂಬ್ ಮತ್ತು ಮುರ್ಜ ಮಹಮದ್ ಮೆಹದಿ ರವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿ. ಮೇಲ್ಕಂಡ ದಾವೆಯನ್ನು ಸದರಿಯವರ ವಿರುದ್ದ ಸಲ್ಲಿಸಿದ್ದೆವು ಎಂದರೆ ಸರಿ. ನಾವು ಸಲ್ಲಿಸಿದ್ದ ಅಸಲು ದಾವೆಯಲ್ಲಿ ಆರೋಪಿ ಪಕ್ಷಗಾರರಾಗಿಲಿಲ್ಲ ಎಂದರೆ ಸರಿ. ಸದರಿ ದಾವೆಯು ನ್ಯಾಯಾಲಯದಲ್ಲಿ ರಾಜಿಯಾಯಿತು ಎಂದರೆ ಸರಿ. ಆ ರೀತಿ ರಾಜಿ ಆಗುವ ಸಂದರ್ಬದಲ್ಲಿ ಸೈಯದ್ ಮೆಹಬೂಬ್ ಮತ್ತು ಮುರ್ಜ ಮಹಮದ್ ಮೆಹದಿ ರವರು ನಮಗೆ ಹಣ ನೀಡಿದ ನಂತರ ರಾಜಿ ಆಯಿತು ಎಂದರೆ ಸರಿ. ಸದರಿ ರಾಜಿಯಂತೆ ನನಗೆ ಎಷ್ಟು ಹಣ ಬಂದಿದೆ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ರಾಜಿಯಂತೆ 10 ಲಕ್ಷಕ್ಕೆ 1 ಚೆಕ್ ನ್ನು ಕೊಟ್ಟಿರುತ್ತಾರೆ. ಆರೋಪಿಯು ಭದ್ರತೆಗಾಗಿ ಸದರಿ ಚೆಕ್ ನ್ನು ಕೊಟ್ಟಿದ್ದರು ಎಂದರೆ ಸಾಕ್ಷಿ ರಾಜಿ ಮಾಡಿಕೊಂಡಿದ್ದೆವೆ ಎಂದು ಕೊಟ್ಟಿದ್ದರು ಎಂದು ನುಡಿಯುತ್ತಾರೆ.

2. ಆ ರೀತಿ ರಾಜಿ ಪಂಚಾಯಿತಿಯಲ್ಲಿ ನ್ಯಾಯಾಲಯದಲ್ಲಿ ನನಗೆ ಸಲ್ಲಬೇಕಾಗಿದ್ದ ಹಣವನ್ನು ಚೆಕ್ ಮತ್ತು ನಗದು ರೂಪದಲ್ಲಿ ಹಣ ಪಡೆದುಕೊಂಡಿದ್ದೇನೆ ಎಂದರೆ ಸರಿ. ಅದೇ ರೀತಿ ನನ್ನ ಸಹೋದರರು ಸಹ ಚೆಕ್ ಮತ್ತು ನಗದು ಹಣ ಪಡೆದುಕೊಂಡು ರಾಜಿ ಅರ್ಜಿಗೆ ಸಹಿ ಮಾಡಿದ್ದರು ಎಂದರೆ ಸರಿ. ಸದರಿ ರಾಜಿ ಪಂಚಾಯಿತಿಯಲ್ಲಿ ಆರೋಪಿಯು ಮುಂದೆ ನಿಂತು ಹಣ ಕೊಡಿಸಿ ರಾಜಿ ಮಾಡಿದ್ದಾರೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಬಾಕಿ ಹಣಕ್ಕೆ ಚೆಕ್ ನೀಡಿದ್ದರು ಎಂದು ನುಡಿಯುತ್ತಾರೆ. ಸದರಿ ರಾಜಿಯಂತೆ ನನ್ನ ಭಾಗಕ್ಕೆ 10 ಲಕ್ಷ ಹಣ ಬರಬೇಕಾಗಿದ್ದು, ಆ ಪೈಕಿ 5 ಲಕ್ಷ ಹಣ ಬಂದಿರುತ್ತದೆ. ನನ್ನ ರಾಜಿ ಪತ್ರದಲ್ಲಿ ನನ್ನ ಭಾಗಕ್ಕೆ 5 ಲಕ್ಷ ಹಣ ಬರೆದಿದ್ದಾರೆ ಎಂದರೆ ಸರಿ. ಆರೋಪಿಯು ಭದ್ರತೆಗಾಗಿ ಚೆಕ್ ನ್ನು ನೀಡಿದ್ದು, ಅದನ್ನು ದುರಪಯೋಗ ಪಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

3. ನಿಪಿ-1 ಚೆಕ್ ನ್ನು ರಾಜಿ ಆಗುವ ಮೊದಲು ನೀಡಿದ್ದರು ಎಂದರೆ ಸರಿಯಲ್ಲ. ನಿಪಿ-1 ಚೆಕ್ ನ್ನು 2017 ನೇ ಸಾಲಿನಲ್ಲಿ ನೀಡಿದ್ದರು. ಆ ರೀತಿ ನನ್ನ ಭಾಗಕ್ಕೆ ಬರಬೇಕಾಗಿದ್ದ ಆಸ್ತಿಯ ವಿಚಾರವಾಗಿ ಚೆಕ್ ನೀಡಿದ್ದರು. ದಿಃ12.09.2016 ರ ರಾಜಿ ಪತ್ರದಂತೆ ನನ್ನ ಭಾಗಕ್ಕೆ ಬರಬೇಕಾದ ಹಣ ಅದೇ ದಿನ ಬಂದಿತ್ತು ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ವಾಟಿ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದೇವನಹಳ್ಳಿ**